**ಕರ್ನಾಟಕ ಸರ್ಕಾರ**
**ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ**
**ಕಾಳಿದಾಸ ಮಾರ್ಗ, ಕೆ.ಜಿ.ರಸ್ತೆ, ಬೆಂಗಳೂರು – 560 009.**

ಸಂಖ್ಯೆ:ಕಪಂರಾಆ/ಅಭಿವೃದ್ಧಿ/219/2023 ದಿನಾಂಕ:-21.07.2023

# ಸಮಾಲೋಚಕರ ನೇಮಕಾತಿಗೆ ಮರು ಪ್ರಕಟಣೆ

ಮಕ್ಕಳಿಗೆ ಸ್ಪಂದಿಸುವ ಸ್ಥಳೀಯ ಆಡಳಿತ ಕೇಂದ್ರದಲ್ಲಿ ಕಾರ್ಯನಿರ್ವಹಿಸಲು ಅರ್ಹ ಮತ್ತು ಅನುಭವಿ ಸಮಾಲೋಚಕರನ್ನು ಈ ಕೆಳಕಂಡ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

1. ಸಮಾಲೋಚಕರು (Child Rights Expert)
2. ಸಮಾಲೋಚಕರು (Local Governance Expert)

ಕರ್ನಾಟಕ ರಾಜ್ಯದಲ್ಲಿ ಸ್ಥಳೀಯ ಸರ್ಕಾರ (ಗ್ರಾಮ ಪಂಚಾಯತಿಗಳು)ವು ಮಕ್ಕಳಿಗೆ ಸ್ಪಂದಿಸುವ ಸಂಸ್ಥೆಯಾಗುವುದರ ಮೂಲಕ ಗ್ರಾಮೀಣ ಮಕ್ಕಳ ಹಕ್ಕುಗಳ ಸಂರಕ್ಷಣೆ ಮತ್ತು ಮಕ್ಕಳ ಯೋಗಕ್ಷೇಮವನ್ನು ವೃದ್ಧಿಸುವ ಸಲುವಾಗಿ **ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು** ಇಲ್ಲಿ ಯುನಿಸೆಫ್ ಅನುದಾನದೊಂದಿಗೆ ಈ ಕೇಂದ್ರವನ್ನು ಸ್ಥಾಪಿಸಲಾಗುತ್ತಿದೆ. ಈ ಹುದ್ದೆಗಳಿಗೆ ಕನ್ನಡ ಜ್ಞಾನವನ್ನು ಕಡ್ಡಾಯವಾಗಿ ಹೊಂದಿರಬೇಕು ಮತ್ತು ವಿವಿಧ ತಾಲ್ಲೂಕುಗಳು ಮತ್ತು ಗ್ರಾಮ ಪಂಚಾಯತ್‌ಗಳಿಗೆ ವ್ಯಾಪಕವಾಗಿ ಪ್ರವಾಸ ಮಾಡುವುದು ಅಗತ್ಯವಿರುತ್ತದೆ. ಈಗಾಗಲೇ ಎರಡು ಬಾರಿ ಮೇಲ್ಕಂಡ ಹುದ್ದೆಗಳಿಗೆ ಪ್ರಕಟಣೆ ಹೊರಡಿಸಿ, ನೇಮಕಾತಿ ಪ್ರಕ್ರಿಯೆ ನಡೆಸಲಾಗಿದ್ದು, ಸೂಕ್ತ ಅಭ್ಯರ್ಥಿಗಳು ಆಯ್ಕೆಯಾಗದ ಕಾರಣ, 3ನೇ ಬಾರಿ ನೇರವಾಗಿ ಆಯುಕ್ತಾಲಯದ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಣೆ ಹೊರಡಿಸಿ, ನೇಮಕಾತಿಯನ್ನು ನಡೆಸಲು ತೀರ್ಮಾನಿಸಲಾಗಿರುತ್ತದೆ.

ಆಸಕ್ತ ಅಭ್ಯರ್ಥಿಗಳು **https://prcrdpr.karnataka.gov.in/** ಲಿಂಕ್‌ನಲ್ಲಿ ಒದಗಿಸಲಾದ ಹುದ್ದೆಗಳ ವಿವರಣೆಯನ್ನು (Job Description) ಗಮನಿಸುವುದು. **31ನೇ ಜುಲೈ 2023 ರಂದು ಸಂಜೆ 5.30 ರೊಳಗಾಗಿ** ಅರ್ಜಿಗಳನ್ನು ಎಲ್ಲಾ ಲಗತ್ತುಗಳೊಂದಿಗೆ ಇ-ಮೇಲ್ ವಿಳಾಸ **prc.recruitment@ka.gov.in** ಕ್ಕೆ ಸಲ್ಲಿಸುವುದು ಹಾಗೂ ಈ ಹಿಂದೆ ಸಮಾಲೋಚಕರ ಹುದ್ದೆಗೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಮತ್ತೊಮ್ಮೆ ಅರ್ಜಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ.

ಆಯುಕ್ತರು
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ,
ಬೆಂಗಳೂರು.